ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 17–10–2020

# ಮಾಧ್ಯಮ ಆಮಂತ್ರಣ

1) ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವ ವಲಯದ ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ಸಂಖ್ಯೆ 24 ರಲ್ಲಿ ಪ್ರಾರಂಭಿಸಲಾಗಿರುವ ಕೋವಿಡ್ ಕೇರ್ ಸೆಂಟರ್‌ಗೆ ಭೇಟಿ :

ವಿ. ಸೋಮಣ್ಣ, ವಸತಿ ಸಚಿವರು

ದಿನಾಂಕ : 19–10–2020, ಸೋಮವಾರ, ಸಮಯ: ಬೆಳಿಗ್ಗೆ 11–30 ಗಂಟೆಗೆ

ಸ್ಥಳ : ಶ್ರೀ ಸಾಯಿ ಕಲಾಮಂದಿರ, ಇಸ್ಕಾನ್ ದೇವಸ್ಥಾನ ಆವರಣ, ಹೆಣ್ಣೂರು ಮುಖ್ಯ ರಸ್ತೆ,
ಹೆಚ್. ಬಿ.ಆರ್. ಬಡಾವಣೆ ಬೆಂಗಳೂರು

## ಪತ್ರಿಕಾ ಪ್ರಕಟಣೆ

## ಮಹಿಳಾ ಆಯೋಗದ ಅಧ್ಯಕ್ಷರಿಂದ ಪೊಲೀಸ್ ಆಯುಕ್ತರ ಭೇಟಿ

ಬೆಂಗಳೂರು, ಅಕ್ಟೋಬರ್ 17 (ಕರ್ನಾಟಕ ವಾರ್ತೆ):

ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಶ್ರೀಮತಿ ಪ್ರಮೀಳಾ ನಾಯ್ಡು ಅವರು ರಾಜ್ಯ ಪೊಲೀಸ್ ಆಯುಕ್ತ ಕಮಲ್‌ಪಂತ್ ಅವರನ್ನು ಭೇಟಿ ಮಾಡಿ ಬೆಂಗಳೂರು ನಗರದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಕುರಿತು ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ಮಹಿಳೆಯರು ಅನುಭವಿಸುವ ಕೌಟುಂಬಿಕ ದೌರ್ಜನ್ಯ, ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ, ವರದಕ್ಷಿಣೆ ಕಿರುಕುಳ/ವರದಕ್ಷಿಣೆ ಸಾವು, ಮಹಿಳೆಯವರು ಮತ್ತು ಹೆಣ್ಣು ಮಕ್ಕಳ ಅಪಹರಣ/ಕಳ್ಳ ಸಾಗಾಣಿಕೆ, ಅತ್ಯಾಚಾರ, ಆಸಿಡ್ ದಾಳಿ, ಹಣ ವಂಚನೆ, ಪ್ರೇಮ ಪ್ರಕರಣಗಳಲ್ಲಿ ವಂಚನೆ, ಮರ್ಯಾದ ಹತ್ಯೆ ಮುಂತಾದ ಪ್ರಕರಣಗಳು ಹೆಚ್ಚಾಗುತ್ತಿದ್ದು, ನೊಂದ ಹಾಗೂ ಸಂತ್ರಸ್ಥ ಮಹಿಳೆಯರಿಗೆ ರಕ್ಷಣೆ ನೀಡುವುದು, ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವುದು, ಇಂತಹ ಘಟನೆಗಳು ಮರುಕಳಿಸದಂತೆ ತಡೆಗಟ್ಟುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಮುಂಜಾಗೃತ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

ಈ ಕುರಿತು ಬೆಂಗಳೂರು ನಗರ ಪೊಲೀಸ್ ಆಯುಕ್ತರು ನವೆಂಬರ್ ತಿಂಗಳ ಎರಡನೇ ವಾರದಲ್ಲಿ ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ " ಹೆಣ್ಣು ಭೋಗದ ವಸ್ತುವಲ್ಲ, ಭಾಗ್ಯದ ಬಾಗಿಲು" ಎಂಬ ಘೋಷವಾಕ್ಯದೊಂದಿಗೆ ಮಹಿಳಾ ದೌರ್ಜನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಟ್ಟು ನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ದಿನಕ್ಕೆ 2 ವಿಭಾಗಗಳಂತೆ ಒಟ್ಟು 08 ವಿಭಾಗಗಳಲ್ಲಿ ಉಪ ಪೊಲೀಸ್ ಆಯುಕ್ತರು(ಡಿ.ಸಿ.ಪಿ.) ಮತ್ತು ಸಹಾಯಕ ಪೊಲೀಸ್ ಆಯುಕ್ತರು (ಎ.ಸಿ.ಪಿ.) ಗಳೊಂದಿಗೆ **Virtual Meeting** ಅನ್ನು ಆಯೋಜಿಸಲಾಗುವುದು ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತರು ತಿಳಿಸಿರುವುದಾಗಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಛಾಯಾಚಿತ್ರ ಲಗತ್ತಿಸಿದೆ)

## ಸಚಿವರ ಪ್ರವಾಸ

ಬೆಂಗಳೂರು, ಅಕ್ಟೋಬರ್ 17 (ಕರ್ನಾಟಕ ವಾರ್ತೆ): ವಸತಿ ಸಚಿವ ವಿ. ಸೋಮಣ್ಣ ಅವರು ಅಕ್ಟೋಬರ್ 18 ರವರೆಗೆ ಕೊಡಗು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ರಾತ್ರಿ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

ಬೆಂಗಳೂರು, ಅಕ್ಟೋಬರ್ 17 (ಕರ್ನಾಟಕ ವಾರ್ತೆ): ಕಂದಾಯ ಸಚಿವ ಆರ್. ಅಶೋಕ್ ಅವರು ಅಕ್ಟೋಬರ್ 19 ರಂದು ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ರಾತ್ರಿ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಅಂತಾರಾಷ್ಟ್ರೀಯ ಸೌರಶಕ್ತಿ ಅತಿಥೇಯ ರಾಷ್ಟ್ರ ಪ್ರಶಸ್ತಿ

**ಬೆಂಗಳೂರು, ಅಕ್ಟೋಬರ್ 17 (ಕರ್ನಾಟಕ ವಾರ್ತೆ):**

ಕರ್ನಾಟಕ ರಾಜ್ಯವು ಸ್ವಾಭಾವಿಕವಾಗಿ ಹೆಚ್ಚು ನವೀಕರಿಸಬಹುದಾದ ಸಂಭವನೀಯ ಸಾಮರ್ಥ್ಯವನ್ನು ಹೊಂದಿದ್ದು, ಅವುಗಳನ್ನುಸೂಕ್ತ ಮಟ್ಟಕ್ಕೆ ಬಳಸಿಕೊಳ್ಳುವ ಮೂಲಕ ರಾಜ್ಯವು ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಹೆಚ್ಚು ಸಾಧನೆ ಮಾಡಬಹುದಾಗಿದೆ ಎಂದು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಟಿ.ಎಂ.ವಿಜಯ್ ಭಾಸ್ಕರ್ ಅವರು ತಿಳಿಸಿದರು.

ಅಕ್ಟೋಬರ್ 16 ರಂದು ನಡೆದ 2020 ನೇ ಸಾಲಿನInternational Solar Alliance(ISA) ಆತಿಥೇಯ ರಾಷ್ಟ್ರ ಪ್ರಶಸ್ತಿ ದಿನಾಚರಣೆಯಲ್ಲಿ ಗೌರವಾನ್ವಿತ ಮುಖ್ಯಮಂತ್ರಿಗಳ ಪರವಾಗಿ ಅವರು ಭಾಷಣ ಮಾಡಿದರು.

ಈವರೆಗೆ ರಾಜ್ಯವು 14930 ಮೆಗಾವ್ಯಾಟ್ ಸಾಮರ್ಥ್ಯದ ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ.ದೇಶದಲ್ಲಿ ಒಟ್ಟಾರೆ ನವೀಕರಿಸಬಹುದಾದ ಇಂಧನ ಸ್ಥಾಪಿತ ಸಾಮರ್ಥ್ಯದಲ್ಲಿ ಕರ್ನಾಟಕ ಮುನ್ನಡೆ ಸಾಧಿಸಿರುವುದರ ಜೊತೆಗೆ ಸೌರ ಮತ್ತು ಕಿರು-ಜಲ ವಿದ್ಯುತ್ ಸ್ಥಾಪಿತ ಸಾಮರ್ಥ್ಯಗಳಲ್ಲಿಯೂ ಸಹಮೊದಲನೇ ಸ್ಥಾನವನ್ನು ಹೊಂದಿದೆ.

ರಾಜ್ಯವು ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ 2050 ಮೆಗಾವ್ಯಾಟ್ ಸಾಮರ್ಥ್ಯದ ವಿಶ್ವದ ಅತಿದೊಡ್ಡ ಸೌರ ಪಾರ್ಕ್ ನ್ನು ರೈತರಿಂದ ಗುತ್ತಿಗೆ ಆಧಾರದ ಮೇಲೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು, ಸಂಪೂರ್ಣವಾಗಿ ಅನುಷ್ಠಾನಗೊಳಿಸಿದೆ. ಈ ಸೌರಪಾರ್ಕ್‌ನಿಂದಾಗಿ ಈ ಪ್ರದೇಶದ ಆರ್ಥಿಕ ಚಟುವಟಿಕೆಗಳಿಗೆ ಭಾರಿ ಉತ್ತೇಜನವನ್ನು ನೀಡಿದಂತಾಗಿದ್ದು ಮತ್ತು ಈ ಪ್ರದೇಶದ ಹಲವಾರು ರೈತರಿಗೆಸೌರ ಘಟಕಗಳಲ್ಲಿ ಉದ್ಯೋಗ ದೊರೆತಿರುತ್ತದೆ.

ಈ ಕಾರ್ಯಕ್ರಮದ ಭಾಗವಾಗಲು ಕರ್ನಾಟಕವನ್ನು ಆಹ್ವಾನಿಸಿದ್ದಕ್ಕಾಗಿ 67 ಪಾಲುದಾರ ರಾಷ್ಟ್ರಗಳನ್ನು ಹೊಂದಿರುವ ISAಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ತಮ್ಮ ಶುಭಾಶಯಗಳನ್ನು ತಿಳಿಸಿದರು. ವಿಶ್ವದ ಅತ್ಯುತ್ತಮ ತೇಲುವ ಸೌರ ಸ್ಥಾವರವನ್ನು ನಿರ್ಮಿಸಿರುವ ದೇಶಕ್ಕೆ ನೀಡಲು ಸ್ಥಾಪಿಸಲಾಗಿರುವ ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಪ್ರಶಸ್ತಿಗಾಗಿ ಕರ್ನಾಟಕ ಸರ್ಕಾರವು 10

ಕೋಟಿ ರೂ ಗಳನ್ನು ನೀಡಿರುತ್ತದೆ. ಕರ್ನಾಟಕ ಸರ್ಕಾರದ ಪ್ರಗತಿಪರ,ಉದ್ಯಮ ಸ್ನೇಹಿ ಹಾಗೂ ದೂರದೃಷ್ಟಿನೀತಿಗಳಿಂದ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಉತ್ತಮ ಸಾಧನೆಯನ್ನು ಸಾಧಿಸಿ, ಪ್ರಸ್ತುತ ಹೆಚ್ಚುವರಿ ಇಂಧನ ಲಭ್ಯವಾಗುವ ಹಂತಕ್ಕೆ ರಾಜ್ಯವುಬಂದಿದೆ.

ವಿದ್ಯುತ್ ಉತ್ಪಾದನೆಯಲ್ಲಿ ರಾಜ್ಯವನ್ನು ಇನ್ನಷ್ಟು ಸುಸ್ಥಿರ ಮತ್ತು ಪರಿಸರ ಸ್ನೇಹಿಯನ್ನಾಗಿ ಮಾಡುವ ಮಹತ್ವಾಕಾಂಕ್ಷೆಯ ದೃಷ್ಟಿಯಿಂದ ವರ್ಷ 2025ಕ್ಕೆ ನವೀಕರಿಸಬಹುದಾದ ಶಕ್ತಿಯನ್ನು ಮತ್ತಷ್ಟು ಹೆಚ್ಚಿಸಲು ಬ್ಯಾಟರಿ ಸಂಗ್ರಹಣೆ ಸ್ಥಾವರ, ತೇಲುವ ಸೌರಸ್ಥಾವರ ಹಾಗೂ SECI ರವರವತಿಯಿಂದ ಅನುಷ್ಠಾನಗೊಳಿಸುತ್ತಿರುವ ಅಲ್ಟ್ರಾ ಮೆಗಾ ನವೀಕರಿಸಬಹುದಾದ ಇಂಧನ ಪಾರ್ಕ್ ಯೋಜನೆಗಳಲ್ಲಿ ಬಂಡವಾಳ ಹೂಡಿಕೆಗೆ ಹೆಚ್ಚಿನ ಅವಕಾಶಗಳಿರುವುದಾಗಿ ತಿಳಿಸಿದರು.

ಕರ್ನಾಟಕದ ನವೀಕರಿಸಬಹುದಾದ ಇಂಧನ ವಲಯದಲ್ಲಿ ಹೂಡಿಕೆ ಮಾಡಲು ಉದ್ಯಮ, ಡೊಮೇನ್ ತಜ್ಞರು, ISAಮತ್ತು ಜಾಗತಿಕ ಸಂಸ್ಥೆಗಳ ಸಹಾಯವನ್ನು ಕೋರಿದರು. ISA ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ರಾಜ್ಯದ ಸಾಧನೆಗಳನ್ನು ಪ್ರದರ್ಶಿಸಲು ಮತ್ತು ಹೂಡಿಕೆಗಳನ್ನು ಆಕರ್ಷಿಸಲು ಅವಕಾಶವನ್ನು ನೀಡಿದಕ್ಕೆ ಧನ್ಯವಾದಗಳನ್ನು ತಿಳಿಸುವ ಮೂಲಕ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಕೈಗಾರಿಕಾ ಇಲಾಖೆಯಲ್ಲಿರುವ ಮತ್ತು ಪ್ರವಾಸೋದ್ಯಮ ಇಲಾಖೆರವರು ಪ್ರವಾಸೋದ್ಯಮದಲ್ಲಿರುವ ಹೂಡಿಕೆ ಅವಕಾಶಗಳ ಕುರಿತು ವಿವರವಾದ ಪ್ರಾತ್ಯಕ್ಷಿಕೆಯನ್ನು ಪ್ರಸ್ತುತಪಡಿಸಿದರು.

ISAಯು ಅಂತರರಾಷ್ಟ್ರೀಯ, ಅಂತರ-ಸರ್ಕಾರಿ ಮತ್ತು ಒಪ್ಪಂದ ಆಧಾರಿತ ಸಂಸ್ಥೆಯಾಗಿದ್ದು,ಹರಿಯಾಣ ರಾಜ್ಯದ ಗುರುಗ್ರಾಮದಲ್ಲಿ ಸ್ಥಾಪಿಸಲ್ಪಟ್ಟಿದ್ದು, ವಿಶ್ವದಾದ್ಯಂತ ಸೌರ ಉತ್ಪಾದನೆಯನ್ನು ಉತ್ತೇಜಿಸುತ್ತಿದೆ. ವಿಶ್ವದ ವಿವಿಧ ಪ್ರದೇಶಗಳ ಹಾಗೂ ವಿವಿಧ ದೇಶಗಳ ಅತ್ಯುತ್ತಮ ತೇಲುವ ಸೌರ (Floating Solar) ಯೋಜನೆಗಾಗಿ ಕರ್ನಾಟಕ ರಾಜ್ಯಸರ್ಕಾರವು ಪ್ರಶಸ್ತಿಯನ್ನು ನೀಡುತ್ತಿದೆ.

**ಛಾಯಾಚಿತ್ರ ಲಗತ್ತಿಸಿದೆ)**

International Solar Alliance (ISA) Host Country Awards Day

Bengaluru, October 17 (Karnataka Information)

Chief Secretary to Govt of Karnataka Shri T. M. Vijay Bhaskar delivered the keynote address on behalf of Hon'ble Chief Minister at the International Solar Alliance (ISA) Host Country Awards Day 2020 held on 16.10.2020. ISA is an International, Inter-Governmental & Treaty-based organization situated in Gurugram, Haryana, India, to promote solar generation all over the World. Karnataka has instituted an award for best floating solar in the World to be given to various Countries in different regions.

Chief Secretary to Govt, took the opportunity to convey his wishes to ISA, which has 67 partner countries, for inviting Karnataka to be a part of this event. Karnataka has contributed Rs. 10 Crores towards ISA Karnataka Visvesvaraya Solar award for recognizing the outstanding contributions in the field of floating solar. Chief Secretary briefed about the achievements by the State in Renewable Energy Sector due to progressive and forward looking policies which has brought Karnataka to this stage of being an energy surplus State. He also informed that the State is blessed with huge Renewable Energy potential, by exploiting these naturally available resources to the optimal level. State has added 14930 MW of renewable capacity over the years. Karnataka leads in overall Renewable Energy installed capacity in India, besides holding No.1

position in both Solar and Mini-Hydel installed capacities. The State has also established World's largest fully commissioned solar park in PavagadaTaluk of Tumkur District of 2050MW capacity, where the land has been acquired through a unique mode of lease from the farmers. This park has given a massive boost to economic activity in the region, and also several farmers of the area have been employed in the Solar units in this Park.

He also briefed about the State's ambitious vision for 2025 to make the State even more sustainable & environment friendly in power generation and highlighted the investment opportunities in Renewable Sector by further augmenting renewable energy, adding storage through private investment, by having demonstration plants for floating solar and for battery storage, and facilitating Ultra Mega Renewable Energy Power Parks to be developed by Solar Energy Corporation of India (SECI). He solicited help of industry, domain experts, ISA and global corporations to invest in the renewable Sector in Karnataka and he ended his speech by conveying thanks to ISA, and to all participants to give Karnataka an opportunity to showcase State's achievements & attract investments. Detailed presentations were also made by Principal Secretary Industries and Tourism department on investment opportunities in the State.

Photo enclosed)